# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 953 |
| ಸದಸ್ಯರ ಹೆಸರು | ಡಾ: ತೇಜಸ್ವಿನಿ ಗೌಡ |
| ಉತ್ತರಿಸಬೇಕಾದ ದಿನಾಂಕ | 17.12.2018 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| | | |
|---|---|---|
| ಅ) | ನಕ್ಸಲ್ ಭಾದಿತ ಅರಣ್ಯ ದಂಚಿನಲ್ಲಿರುವ ಗ್ರಾಮಗಳ ಕೃಷಿಕರಿಗೆ ಒದಗಿಸಿರುವ ವಿಶೇಷ ಸವಲತ್ತುಗಳೇನು: ಕಾಡು ಪ್ರಾಣಿಗಳು ಹಾಗೂ ನಕ್ಸಲ್‌ರಿಂದ ಬೆಳೆ ಹಾಗೂ ಕೃಷಿಕರ ರಕ್ಷಣೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ: | ನಕ್ಸಲ್ ಭಾದಿತ ಅರಣ್ಯದಂಚಿನಲ್ಲಿರುವ ಗ್ರಾಮಗಳ ಕೃಷಿಕರಿಗೆ ರೈತ ಸಂಪರ್ಕ ಕೇಂದ್ರಗಳ ಮೂಲಕ ಕೃಷಿ ಇಲಾಖೆಯ ಎಲ್ಲಾ ಸವಲತ್ತುಗಳನ್ನು ಒದಗಿಸಲಾಗುತ್ತಿದೆ.<br><br>ರೈತರಿಗೆ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಬೆಳೆ ನಷ್ಟ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: **ಅಪಜೀ 130 ಎಫ್‌ಡಬ್ಲ್ಯೂಎಲ್ 2016 ದಿನಾಂಕ 19.09.2016** ರಲ್ಲಿ ನಿಗದಿಪಡಿಸಲಾಗಿರುವ ಪರಿಹಾರ ಧನವನ್ನು ಪಾವತಿಸಲಾಗುತ್ತಿದೆ ಹಾಗೂ ವನ್ಯಪ್ರಾಣಿಗಳು ರೈತರ ಜಮೀನಿಗೆ ಬರದಂತೆ ನೋಡಿಕೊಳ್ಳಲು ಈ ಕೆಳಕಂಡ ಕ್ರಮಗಳನ್ನು ಅರಣ್ಯ ಇಲಾಖಾ ವತಿಯಿಂದ ಕೈಗೊಳ್ಳಲಾಗುತ್ತಿದೆ.<br><br>1) ಸೌರಶಕ್ತಿ ಬೇಲಿ ನಿರ್ಮಾಣ / ನಿರ್ವಹಣೆ<br>2) ಆನೆ ತಡೆ ಕಂದಕ ನಿರ್ಮಾಣ / ನಿರ್ವಹಣೆ<br>3) ವನ್ಯಜೀವಿಗಳಿಗೆ ಕುಡಿಯುವ ನೀರಿಗಾಗಿ ಕೆರೆಗಳ ನಿರ್ಮಾಣ / ನಿರ್ವಹಣೆ<br>4) ಬೇಟೆ ತಡೆ ಶಿಬಿರ ಹಾಗೂ ಕ್ಷಿಪ್ರ ಸ್ಪಂದನ ತಂಡಗಳಿಗೆ (Rapid Response Teams) ನಿಸ್ತಂತು ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br>5) ವನ್ಯಪ್ರಾಣಿಗಳ ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br>6) ವನ್ಯಪ್ರಾಣಿಗಳ ಚಲನ-ವಲನದ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.<br>7) ಆನೆಗಳ ಹಾವಳಿ ತಡೆಯಲು ಆಂಟಿ ಪೋಚಿಂಗ್ ಕ್ಯಾಂಪ್, ಆಂಟಿ ಡಿಪ್ರಿಡೇಷನ್ ಕ್ಯಾಂಪುಗಳು ಹಾಗೂ ದಿನಗೂಲಿ ನೌಕರರನ್ನು ನೇಮಿಸಿಕೊಂಡು ಗಸ್ತು ಮಾಡಲಾಗುತ್ತಿದೆ. ಅಧಿಕಾರಿ ಮತ್ತು ಸಿಬ್ಬಂದಿಯವರಿಂದ ರಾತ್ರಿ ಗಸ್ತು ಪಹರೆ ಮಾಡಲಾಗುತ್ತಿದೆ.<br>8) ಬೋರ್‌ವೆಲ್‌ಗಳ ಮೂಲಕ ವಾಟರ್ ಪಾಂಡ್‌ಗಳಿಗೆ ಬೇಸಿಗೆಯಲ್ಲಿ ನೀರು ಸರಬರಾಜು ಮಾಡಲಾಗಿದೆ. ಕೆರೆ ಕುಂಟೆಗಳಲ್ಲಿ ಹೂಳನ್ನು ತೆಗೆಸಿ ನೀರನ್ನು ಸಂಗ್ರಹಿಸಲಾಗಿದೆ. ನಾಲಾ ಬಂಡ್ ಚೆಕ್‌ಡ್ಯಾಂಗಳ ನಿರ್ಮಾಣ ಮಾಡಿ ನೀರಿನ ಸಂಗ್ರಹ ಮಾಡಲಾಗಿದೆ ಹಾಗೂ ಬೇಸಿಗೆ ಕಾಲದಲ್ಲಿ ಕೃತಕ ಸಿಮೆಂಟ್ ತೊಟ್ಟಿಗಳಲ್ಲಿ ಪ್ರಾಣಿಪಕ್ಷಿಗಳಿಗಾಗಿ ನೀರಿನ ಸಂಗ್ರಹ ಮಾಡಲಾಗಿದೆ. |

| | | |
|---|---|---|
| ಆ) | ದುರ್ಗಮ ಅರಣ್ಯಗಳ ನಡುವೆ ಇರುವ ಕೃಷಿಕ ಗ್ರಾಮಸ್ಥರಿಗೆ ಸಿಗಬೇಕಾದ ಕೃಷಿ ಬೀಜ, ಗೊಬ್ಬರ, ಕೃಷಿ ಯಂತ್ರ ಹಾಗೂ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೆ: | ದುರ್ಗಮ ಅರಣ್ಯ ಪ್ರದೇಶಗಳ ನಡುವೆ ಇರುವ ಕೃಷಿಕ ಗ್ರಾಮಸ್ಥರಿಗೆ ಅವರ ಭೂ ಹಿಡುವಳಿ ದಾಖಲೆಯನ್ನಾಧರಿಸಿ ಹತ್ತಿರದ ರೈತ ಸಂಪರ್ಕ ಕೇಂದ್ರಗಳು ಹಾಗೂ ಆಯ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ಅವಶ್ಯಕವಿರುವ ವಿವಿಧ ಬೆಳೆ/ತಳಿಗಳ ಬಿತ್ತನೆ ಬೀಜ, ಯಂತ್ರೋಪಕರಣ ಇನ್ನಿತರ ಅತ್ಯಾವಶ್ಯಕ ಸೌಲಭ್ಯಗಳನ್ನು ಸಕಾಲದಲ್ಲಿ ವಿತರಿಸಲಾಗುತ್ತಿದೆ. |
| ಇ) | ಕೃಷಿಕರಿಗಾಗಿ ಇರುವ ಆರೋಗ್ಯ ಯೋಜನೆಗಳು, ಕೃಷಿ ಉಪ ಕಸುಬುಗಳಾದ ಪಶುಸಂಗೋಪನೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆಯಂತಹ ಯೋಜನೆ ಅನುಷ್ಠಾನವಾಗಿವೆಯೆ: ಯಾವುದಾದರೂ ಇಲಾಖೆಯಿಂದ ಆದ ಆತಂಕಗಳು ಇವೆಯೆ: ಇದ್ದಲ್ಲಿ ನಿವಾರಣೆ ಮಾಡಲಾಗುತ್ತಿದೆಯೆ? | ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: HFW/69/CGE/2018 Bangalore, Dated 15.11.2018 ರ ಆದೇಶದಲ್ಲಿನ Integration of Ayushman Bharat – Arogya Karnataka Scheme ರಡಿ ಲಭ್ಯವಿರುವ ಆರೋಗ್ಯ ಯೋಜನೆಗಳನ್ನು ಎಲ್ಲಾ ರೈತ ಕುಟುಂಬದವರಿಗೆ ಸಹ ಒದಗಿಸಲಾಗಿದೆ.<br><br>**ಪಶುಸಂಗೋಪನಾ ಇಲಾಖೆ:-** ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಕೃಷಿಕರಿಗಾಗಿ ಇರುವ ಉಪಕಸುಬುಗಳ ಯೋಜನೆಗಳಾದ ಹೈನುಗಾರಿಕೆ / ಕೋಳಿ / ಕುರಿ / ಮೇಕೆ/ ಹಂದಿ / ಮೊಲ ಸಾಕಾಣಿಕೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಯಾವುದೇ ಅಡ್ಡಿ ಆತಂಕಗಳು ಇರುವುದಿಲ್ಲ. |

**ಸಂಖ್ಯೆ:ಕೃಇ 141 ಕೃಮಸ 2018**

(ಎನ್.ಹೆಚ್. ಶಿವಶಂಕರ ರೆಡ್ಡಿ)
ಕೃಷಿ ಸಚಿವರು